

ಸಂಶೋಧನಾ ಸಂಸ್ಥೆಗೆ ಸೇರಿಕೊಂಡರು. ನಂತರ ಅಲ್ಲಿಯೇ ಅಧ್ಯಾಪಕರಾಗಿ ಕೆಲಸ ಮಾಡಿ, ಹಲವು ವರ್ಷಗಳ ಅನುಭವದ ನಂತರ ಮುಂಬೈ ಐಐಟಿಯ ಚೇರ್ ಪ್ರೊಫೆಸರ್ ಆಗಿ ನೇಮಕಗೊಂಡರು.

ಯಾವುದೇ ವ್ಯವಸ್ಥೆಯಲ್ಲಿ ಕಂಡುಬರುವ ದೀರ್ಘಕಾಲೀನ ವರ್ತನೆಗಳ ಕುರಿತು ಅಧ್ಯಯನ ಮಾಡುವ ಗಣಿತದ ಏರ್ಗೋಡಿಕ್ ಥಿಯರಿಯನ್ನು ನಿರೂಪಿಸಿದ ಕೀರ್ತಿ ಇವರದು. ವ್ಯವಸ್ಥೆಗಳು ಡೈನಮಿಕ್ ಆಗಿರುವ ಜೊತೆಗೆ ಅದಲು ಬದಲು ಮಾಡಬಹುದಾದ ಗುಣವನ್ನು ಹೊಂದಿರುತ್ತವೆ ಎಂಬುದನ್ನು ನಿರೂಪಿಸುವ ಗಣಿತದ ಕ್ರಿಯೆಯನ್ನು 'ಎರ್ಗೋಡಿಕ್ ಥಿಯರಿ' ಎನ್ನುತ್ತೇವೆ. 1991ರಲ್ಲಿ ಇವರಿಗೆ ಶಾಂತಿ ಸ್ವರೂಪ್ ಭಟ್ನಾಗರ್ ಬಹುಮಾನ ದೊರಕಿದೆ.



## ಅಂತರ್ಜಲ ಭಗೀರಥ ಬಿ.ಪಿ. ರಾಧಾಕೃಷ್ಣ

ರಾಜ್ಯದ 'ಅಂತರ್ಜಲ ಭಗೀರಥ' ಎಂದು ಪ್ರಸಿದ್ಧರಾದ ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ ಭಾರತದ ಶ್ರೇಷ್ಠ ಭೂ ವಿಜ್ಞಾನಿಗಳಲ್ಲೊಬ್ಬರು. ಬೆಂಗಳೂರಿನಲ್ಲಿ ಜನಿಸಿದ ಪುಟ್ಟಯ್ಯನವರನ್ನು ಭಾರತೀಯ ಭೂ ವಿಜ್ಞಾನ ಕ್ಷೇತ್ರದ ದೊಡ್ಡಣ್ಣ ಎಂದೇ ಕರೆಯಲಾಗುತ್ತದೆ. ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಆನರ್ಸ್ ಪದವಿ ಪಡೆದ ಇವರು ಫೀಲ್ಡ್ ಅಸಿಸ್ಟೆಂಟ್ ಆಗಿ ಮೈಸೂರು ಜಿಯಾಲಜಿಕಲ್ ವಿಭಾಗಕ್ಕೆ ಕೆಲಸಕ್ಕೆ ಸೇರಿಕೊಂಡರು. 37 ವರ್ಷಗಳ ಸುದೀರ್ಘ ಸೇವೆಯಲ್ಲಿ ನಾಡಿಗೆ ನೆರವಾಗುವ ಅನೇಕ ಕೆಲಸಗಳನ್ನು ಕೈಗೊಂಡರು. ಅದೇ ಸಂಸ್ಥೆಯ ನಿರ್ದೇಶಕರಾಗಿ ದು ಡಿ ದು ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಸ್ಥಾಪಿಸುವಲ್ಲಿ ಮುಂಚೂಣಿ ಪಾತ್ರ ವಹಿಸಿದರು. ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾದ ಸಂಶೋಧನಾ ವಾರ್ಷಿಕ ಪತ್ರಿಕೆಯನ್ನು ಪ್ರತಿ ತಿಂಗಳು ಪ್ರಕಟವಾಗುವ ವ್ಯವಸ್ಥೆ ಮಾಡಿದರು. ಅಂತರ್ಜಲ ಆಪದ್ಧನವಿದ್ದಂತೆ, ಅದನ್ನು ಜಾಗರೂಕವಾಗಿ ಬಳಸಬೇಕು, ಭೂಮಿಯಿಂದ ನೀರನ್ನು ಮೇಲೆತ್ತುವುದಷ್ಟೇ ಅಲ್ಲ, ಭೂಮಿಯ ಆಳಕ್ಕೂ ಕಳಿಸುತ್ತಿರಬೇಕು ಎಂದಿದ್ದರು. ತುಮಕೂರು ಜಿಲ್ಲೆಯ ಬೆಳ್ಳಾರದ ಬಳಿ ಚಿನ್ನದ ನಿಕ್ಷೇಪವಿರುವ ಶಿಲಾ ಜಾಡನ್ನು ಪತ್ತೆ ಮಾಡಿದ್ದರು. ಚಿತ್ರದುರ್ಗದ ಇಂಗಳದಾಳಿನಲ್ಲಿ ತಾಮ್ರದ ನಿಕ್ಷೇಪವನ್ನು ಮೊದಲು ಪತ್ತೆ ಹಚ್ಚಿದ್ದರು.

ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ರಾಧಾಕೃಷ್ಣ ಅವರನ್ನು ಗೌರವಿಸಿದೆ. ಕೋಲಾರದ ಚಿನ್ನದ ಗಣಿಯಲ್ಲಿ ದೊರಕಿದ ಲೆಡ್ ಟೆಲ್ಲೂರಿಯಂ ಸಲ್ಫೈಡ್‌ನ ಖನಿಜವೊಂದಕ್ಕೆ ಇಂಗ್ಲೆಂಡ್‌ನ ವಿಜ್ಞಾನಿ ಡಾ. ಗೆಂಕ್ಲಿನ್ 'ರಾಧಾ ಕೃಷ್ಣೈಟ್' ಎಂದು ಹೆಸರು ನೀಡಿ ಗೌರವಿಸಿದ್ದಾರೆ. ಸಂಶೋಧನೆಯಷ್ಟೇ ಅಲ್ಲ ತಾವು ಮಾಡುತ್ತಿರುವ ಕೆಲಸವನ್ನು ಜನರಿಗೆ ತಲುಪಿಸಲು ಸಾಹಿತ್ಯ ಕೃತಿಗಳನ್ನು ರಚಿಸಿದರು. ಅವರು ರಚಿಸಿದ ಸಿ.ವಿ. ರಾಮನ್, ಮೇರಿ ಕ್ಯೂರಿ, ಶ್ರೀನಿವಾಸ ರಾಮಾನುಜನ್, ಚಾರ್ಲ್ಸ್ ಡಾರ್ವಿನ್, ಬಿಜಿಎಲ್ ಸ್ವಾಮಿ ಅವರ ಜೀವನ ಚರಿತ್ರೆಗಳು ಇಂದಿಗೂ ಜನಪ್ರಿಯ. ಅವರ ಕೃತಿ 'ಅಂತರ್ಜಲ' ಭೂ ವಿಜ್ಞಾನಿಗಳ ಕೈಪಿಡಿ ಎನಿಸಿದೆ.

## ರಾಮಚಂದ್ರ ಎಸ್. ಹೊಸಮನೆ

ಸ್ನೇಹಿತರ ವಲಯದಲ್ಲಿ 'ರಾಮ್' ಎಂದೇ ಖ್ಯಾತರಾಗಿರುವ ರಾಮಚಂದ್ರ ಹೊಸಮನೆಯವರು ಜನಿಸಿದ್ದು ಗೋಕರ್ಣದಲ್ಲಿ. ಬಾಲ್ಯದ ವಿದ್ಯಾಭ್ಯಾಸವನ್ನು ಭದ್ರಕಾಳಿ ಶಾಲೆಯಲ್ಲಿ ಪೂರೈಸಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿಎಸ್ಸಿ ಪದವಿ ಗಳಿಸಿದ ರಾಮ್, ಆರ್ಗ್ಯಾನಿಕ್ ಕೆಮಿಸ್ಟ್ರಿಯಲ್ಲಿ ಎಂಎಸ್ಸಿ ಪದವಿ ಪಡೆದರು. ಅಮೆರಿಕದ ಯುನಿವರ್ಸಿಟಿ ಆಫ್ ಸೌತ್ ಫ್ಲೋರಿಡಾದಿಂದ ಆರ್ಗ್ಯಾನಿಕ್ ಸಿಂಥೆಸಿಸ್ ಮತ್ತು ಮೆಡಿಸಿನಲ್ ಕೆಮಿಸ್ಟ್ರಿಯಲ್ಲಿ ಎಂ.ಎಸ್. ಮತ್ತು ಪಿಎಚ್.ಡಿ ಪದವಿಗಳನ್ನು ಪಡೆದರು. ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಬಹು ಮುಖ್ಯ ಸಂಶೋಧನೆಗಳನ್ನು ಕೈಗೊಂಡರು. ಇವರ 50 ಸಂಶೋಧನಾ ಯೋಜನೆಗಳಿಗೆ ಅಮೆರಿಕ ಸರ್ಕಾರದ ಅನುದಾನ ದೊರಕಿದೆ. ವಿಶ್ವಮಟ್ಟದ ಏಳು ಹಕ್ಕುಸ್ವಾಮ್ಯಗಳು ರಾಮ್ ಹೆಸರಿನಲ್ಲಿವೆ. 1996ರಲ್ಲಿ ಅಮೆರಿಕನ್ ಕೆಮಿಕಲ್ ಸೊಸೈಟಿಯ 'ಸೀಡ್' (SEED – ಸಮ್ಮರ್ ಎಕ್ಸ್‌ಪೀರಿಯನ್ಸ್ ಫಾರ್ ದ ಎಕನಾಮಿಕಲಿ ಡಿಸ್ ಅಡ್ವಾನ್ಟೇಜ್ಡ್) ಯೋಜನೆಯ ವಿಶೇಷ ಮಾರ್ಗದರ್ಶಕ ಎಂಬ ಗೌರವ ಅವರಿಗೆ ಸಂದಿದೆ. ಹಿಮೊಗ್ಲೋಬಿನ್ ಬಳಸಿಕೊಂಡು ರಕ್ತಕ್ಕೆ ಪರ್ಯಾಯವಾಗಿರುವ ಸಂಯುಕ್ತದ ಪತ್ತೆಯಲ್ಲಿ ತೊಡಗಿರುವ ರಾಮ್ ಎಚ್‌ಐವಿ ಮತ್ತು ಹೆಪಟೈಟಿಸ್ ಸಿ ಚಿಕಿತ್ಸೆಗೆ ಉಭಯ ಪ್ರತಿಬಂಧಕ ಔಷಧಿಗಳ ಹುಡುಕಾಟದಲ್ಲಿದ್ದಾರೆ.

## ಖಗ ಕಾಳಜಿಯ ಎಸ್.ಎ. ಹುಸೇನ್

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ಜನಿಸಿದ ಸೈಯದ್ ಅಬ್ದುಲ್ಲಾ ಹುಸೇನ್ ಭಾರತದ ಪ್ರಮುಖ ಪಕ್ಷಿ ತಜ್ಞರಲ್ಲೊಬ್ಬರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಸ್ತಿ ಮಿಷನ್ ಶಾಲೆಯಲ್ಲಿ ಪಡೆದ ಹುಸೇನ್, ಭುವನೇಂದ್ರ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪದವಿ ಸಂಪಾದಿಸಿದರು. ವಿದ್ಯಾರ್ಥಿ ದೆಸೆಯಲ್ಲಿಯೇ ಪಕ್ಷಿಲೋಕದ ಕುರಿತು ಆಸಕ್ತಿ ಬೆಳೆಸಿಕೊಂಡಿದ್ದರು. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಿದಾಗ, ಸಂಸ್ಥೆಯನ್ನು ಮುನ್ನಡೆಸುತ್ತಿದ್ದ

## 'ಚಿಂತಾಮಣಿ' ನಾಗೇಶ ರಾಮಚಂದ್ರ ರಾವ್

ಬೆಂಗಳೂರಿನಲ್ಲಿ ಜನಿಸಿ ವಿಶ್ವವಿಖ್ಯಾತ ಹೆಸರು ಮಾಡಿರುವ ಸಿ.ಎನ್.ಆರ್. ರಾವ್ ಎಂದೇ ಖ್ಯಾತರಾಗಿರುವ ಇವರು, ಬಸವನಗುಡಿಯ ಆಚಾರ್ಯ ಪಾಠಶಾಲೆಯ ವಿದ್ಯಾರ್ಥಿ. ಅಂಕಗಣಿತ ಭಾರತೀಯ ಮೌಲ್ಯ ಮತ್ತು ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇಟ್ಟುಕೊಂಡಿದ್ದ ರಾವ್, ಪ್ರಾಥಮಿಕ ವಿದ್ಯಾಭ್ಯಾಸವನ್ನು ತಾಯಿಯ ಮೂಲಕವೇ ಪಡೆದರು. ತಮ್ಮ ಆರನೆಯ ವಯಸ್ಸಿಗೆ ಮಾಧ್ಯಮಿಕ ಶಾಲೆ ಪ್ರವೇಶ ಪಡೆದ ಅವರು ತಮ್ಮ ಸಹಪಾಠಿಗಳಿಗೆ ಗಣಿತ ಮತ್ತು ಇಂಗ್ಲಿಷ್ ಹೇಳಿಕೊಡುತ್ತಿದ್ದರು. ಹೈಸ್ಕೂಲು ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿಯೇ ಮುಗಿಸಿ ನಂತರ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ಹಾಗೂ ಮೈಸೂರು ವಿವಿಯಲ್ಲಿ 1951ರಲ್ಲಿ ಪದವಿ ಪಡೆದಾಗ ಅವರ ವಯಸ್ಸು ಕೇವಲ 17. ನಾಗೇಶ ರಾವ್ ತಮ್ಮ ಅಧ್ಯಾಪಕರ ಸಲಹೆಯಂತೆ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಸೇರಿಕೊಂಡು, ಭೌತ ರಾಸಾಯನ (ಫಿಸಿಕಲ್ ಕೆಮಿಸ್ಟ್ರಿ) ವಿಜ್ಞಾನದಲ್ಲಿ ಎಂ.ಎಸ್ಸಿ. ಸಂಪಾದಿಸಿದರು. ಅವರ ಅಸಾಧಾರಣ ಬುದ್ಧಿವಂತಿಕೆಯನ್ನು ಕಂಡ ಖರಗ್‌ಪುರ ಐಐಟಿಯು ಪಿಎಚ್.ಡಿ ಪದವಿಗೆ ಧನಸಹಾಯ ನೀಡಲು ಮುಂದೆ ಬಂದಿತು. ಮೆಸಾಚುಸೆಟ್ಸ್, ಪೆನ್ ಸ್ಟೇಟ್, ಕೊಲಂಬಿಯಾ ಪರ್ಡು ವಿಶ್ವವಿದ್ಯಾಲಯಗಳು ಧನಸಹಾಯ ನೀಡುವುದಾಗಿ ಪತ್ರ ಬರೆದವು. ಪರ್ಡು ವಿವಿಯನ್ನು ಸೇರಿಕೊಂಡ ರಾವ್ ಕೇವಲ ಎರಡು ವರ್ಷ ಒಂಬತ್ತು ತಿಂಗಳ ಅವಧಿಯಲ್ಲಿ (1958ರಲ್ಲಿ) ಪಿಎಚ್.ಡಿ ಮುಗಿಸಿದರು. ಮರುವರ್ಷ ಬೆಂಗಳೂರಿಗೆ ಹಿಂದಿರುಗಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು. ವಿದೇಶಗಳ ಪ್ರಯೋಗಾಲಯಗಳಿಗೆ ತೆರಳಿ ಸೂಪರ್ ಕಂಡಕ್ಟಿವಿಟಿಯ ಕುರಿತು ಸಂಶೋಧನೆ ಮಾಡಿದರು.

ಸಾಮಾನ್ಯ ತಾಪಮಾನದಲ್ಲಿ ಲೋಹಗಳು ವಿದ್ಯುತ್ ನಿರೋಧಕಗಳಾಗಿ ಕೆಲಸ ಮಾಡುತ್ತವೆ. ಆದರೆ ಅತ್ಯಂತ ಕಡಿಮೆ ಉಷ್ಣತೆಯಲ್ಲಿ ಕೆಲವು ಶುದ್ಧ ಮತ್ತು ಇನ್ನೂ ಕೆಲವು ಮಿಶ್ರ ಲೋಹಗಳು ವಿದ್ಯುತ್ ಸಂವಹನಕ್ಕೆ ಯಾವುದೇ